# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರನ್ನು ಅಮಾನತ್ತಿನಲ್ಲಿಡುವ ಬಗ್ಗೆ.

**ಓದಲಾಗಿದೆ:**

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕಕಡತ ಸಂಖ್ಯೆ: ಡಿಟಿಇ 06 ಡಿಇಕ್ಯೂ (1) 2013, ದಿನಾಂಕ: 17-08-2013.

**ಪ್ರಸ್ತಾವನೆ:**

ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರು ಸದರಿ ಸಂಸ್ಥೆಗೆ ಸೇರಿದ ಭೂಮಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ದಾವೆ ಸಂಖ್ಯೆ: ಓಎಸ್ ನಂ.37/2005ಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರಿಗೆ ಸರಿಯಾಗಿ ದಾಖಲೆ ನೀಡದೆ, ನ್ಯಾಯಾಲಯಕ್ಕೆ ಸಮಯಕ್ಕೆ ಸರಿಯಾಗಿ ಹಾಜರಾಗದೆ ಅಸಹಕಾರ ತೋರಿರುತ್ತಾರೆಂದು ದಿನಾಂಕ: 16-08-2013ರಂದು ಸರ್ಕಾರಿ ವಕೀಲರಾದ ಶ್ರೀ ವಿಲಾಸ್ ರಾವ್ ಎಂ.ಮೋರೆ ಇವರು ತಿಳಿಸಿದ್ದು, ಜಿಲ್ಲಾಧಿಕಾರಿಗಳು, ಪ್ರಾಂಶುಪಾಲರ ನಡವಳಿಕೆಯಿಂದ ಈ ದಾವೆಯಲ್ಲಿ ಹಿನ್ನಡೆಯಾಗಿದ್ದು, ಸರ್ಕಾರದ ಅಮೂಲ್ಯವಾದ ಜಮೀನು ಕೈಬಿಟ್ಟು ಹೋಗುವ ಸಾಧ್ಯತೆಯಿದ್ದು, ಸದರಿಯವರು ಖಾಸಗಿಯವರೊಂದಿಗೆ ಶಾಮೀಲಾಗಿದ್ದಾರೆಂದು ಸಂದೇಹ ವ್ಯಕ್ತಪಡಿಸಿರುತ್ತಾರೆ. ಪ್ರಾಂಶುಪಾಲರು ಈ ದಾವೆಗೆ ಸಂಬಂಧಿಸಿದಂತೆ ಸಾಕ್ಷಿ ಒದಗಿಸಲು ಯಾವುದೇ ಆಸಕ್ತಿ ತೋರದೆ, ವಿಚಾರಣೆ ದಿನಾಂಕ: 01-08-2013, 08-08-2013 ಮತ್ತು 16-08-2013ರಂದು ನ್ಯಾಯಾಲಯಕ್ಕೂ ಹಾಜರಾಗದೆ ವಿಚಾರಣೆಯನ್ನು ಮುಂದೂಡಲು ಕೋರಿರುತ್ತಾರೆ. ಈ ರೀತಿ ಗೈರು ಹಾಜರಾಗಿರುವುದನ್ನು ತೀಕ್ಷ್ಣವಾಗಿ ಪರಿಗಣಿಸಿ ನ್ಯಾಯಾಲಯವು ದಾವೆಯನ್ನು ವಜಾ ಮಾಡುವ ಸಂಭವವಿದ್ದು, ಶ್ರೀ ಗೋವಿಂದರಾಜು ಇವರು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ಗಂಭೀರವಾದ ಪ್ರಕರಣಕ್ಕೆ ಬೇಜವಾಬ್ದಾರಿ ತೋರಿಸಿರುವುದು ಒಬ್ಬ ಸರ್ಕಾರಿ ನೌಕರನಿಗೆ ತರವಲ್ಲದ ವರ್ತನೆಯಾಗಿರುತ್ತದೆ.

ಶ್ರೀ ಗೋವಿಂದರಾಜು, ಇವರು ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ: 25-11-2004ರ ಮಧ್ಯಾಹ್ನ 2 ರಿಂದ 5ರವರೆಗೆ ನಡೆಯಬೇಕಾಗಿದ್ದ ತಾಂತ್ರಿಕ ಶಿಕ್ಷಣ ಇಲಾಖೆಯ 2004ರ ಪೂರಕ ಸೆಮಿಸ್ಟರ್ ಡಿಪ್ಲೋಮಾ ಪರೀಕ್ಷೆಯ ವಿಷಯ ಕೋಡ್ 210 (Digital Electronics-I) ಮತ್ತು 225 (Programming in C Language) ಪರೀಕ್ಷೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿ ದಿನಾಂಕ: 03-12-2004ರಂದು ಮಧ್ಯಾಹ್ನ 2 ರಿಂದ 5ಕ್ಕೆ ನಡೆಸಲು ಸಕಾಲಕ್ಕೆ ಅಂಚೆ ಮೂಲಕ ಮಾಹಿತಿ ತಲುಪಿದ್ದರೂ ಇವರು ಅದನ್ನು ನಿರ್ಲಕ್ಷಿಸಿ ದಿನಾಂಕ: 25-11-2004ರಂದೇ ಪರೀಕ್ಷೆ ನಡೆಸಿ ಕರ್ತವ್ಯ ಚ್ಯುತಿ ಎಸಗುವುದರೊಂದಿಗೆ ಪುನ: ಪ್ರಶ್ನೆ ಪತ್ರಿಕೆ ಮುದ್ರಿಸಲು ಕಾರಣರಾಗಿ ಸರ್ಕಾರಕ್ಕೆ ಆರ್ಥಿಕವಾಗಿ ರೂ.1,36,200/-ಗಳ ನಷ್ಟ ಉಂಟು ಮಾಡಿ ಕರ್ತವ್ಯ ನಿಷ್ಠೆ, ಸಮಗ್ರತೆ ತೋರಿಸಲು ವಿಫಲರಾಗಿರುತ್ತಾರೆ. ಈ ಬಗ್ಗೆ ಶ್ರೀ ಎ.ಕೃಷ್ಣಪ್ಪ, ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ಅವರ ವಿರುದ್ಧದ ಆರೋಪವು ರುಜುವಾತಾಗಿರುತ್ತದೆ ಎಂದು ವರದಿ ನೀಡಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ರೂ.1,36,200/-ಗಳನ್ನು ಅವರ ಸಂಬಳದಿಂದ ವಸೂಲು ಮಾಡುವಂತೆ ದಿನಾಂಕ: 01-07-2008ರಲ್ಲಿ ಸರ್ಕಾರವು ದಂಡನೆಯನ್ನು ವಿಧಿಸಿತು. ಆದರೆ ಅವರು ಇಲ್ಲಿಯವರೆಗೂ ಸದರಿ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸದೆ ಕರ್ತವ್ಯ ಲೋಪವೆಸಗಿರುತ್ತಾರೆ.

ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆಗೊಂಡು ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇಲ್ಲಿ ಸಿವಿಲ್

ಇಂಜಿನಿಯರಿಂಗ್ ವಿಭಾಗದ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸೈಯದ್ ಸರ್ಫರಾಜ್ ಅಲಿ ಇವರನ್ನು ದಿನಾಂಕ: 16-08-2012ರಿಂದ ಶಿಸ್ತು ಪ್ರಾಧಿಕಾರದ ಗಮನಕ್ಕೆ ತರದೆ ತಾವೇ ಸರ್ಕಾರಿ ಸೇವೆಯಿಂದ ವಜಾಗೊಳಿಸಿದ್ದು, ಇವರು ಅಧಿಕಾರ ವ್ಯಾಪ್ತಿ ಮೀರಿ ವರ್ತಿಸಿರುವ ಬಗ್ಗೆ ಹಲವಾರು ಜ್ಞಾಪನಗಳನ್ನು ನೀಡಿ ವಿವರಣೆ ಕೋರಿದರೂ ಈವರೆವಿಗೂ ವಿವರಣೆ ಸಲ್ಲಿಸದೆ ಮೇಲಾಧಿಕಾರಿಗಳ ಆದೇಶವನ್ನು ತಿರಸ್ಕರಿಸಿರುತ್ತಾರೆ.

ಶ್ರೀ ಗೋವಿಂದರಾಜು ಇವರ ವಿರುದ್ಧ ಶ್ರೀ ಶಂಕರ ಶಂಭು ಜಾದವ್, ಬೀದರ್ ಇವರು ನೀಡಿದ ದೂರಿನನ್ವಯ ನಿರ್ದೇಶನಾಲಯದ ಜಂಟಿ ನಿರ್ದೇಶಕರ ನೇತೃತ್ವದಲ್ಲಿ ರಚಿಸಲಾದ ತನಿಖಾ ತಂಡವು ತನಿಖೆ ನಡೆಸಿದ್ದು. ತನಿಖಾ ತಂಡವು ನೀಡಿದ ವರದಿಯನ್ವಯ ದಿನಾಂಕ: 02-05-2013ರಂದು ನಿರ್ದೇಶಕರ ಅನುಮೋದನೆ ಪಡೆಯದೆ ನಿಯಮಗಳನ್ನು ಅನುಸರಿಸದೆ ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದರೂ ಸರ್ಕಾರದ ಅನುಮತಿ ಪಡೆಯದೆ ಆಟೋಮೊಬೈಲ್ ವಿಭಾಗಕ್ಕಾಗಿ Alto ಕಾರನ್ನು ನಿಯಮಬಾಹಿರವಾಗಿ ಖರೀದಿಸಿದಲ್ಲದೆ ಪಿ.ಡಿ. ಖಾತೆಯಿಂದ ರೂ.3.00 ಲಕ್ಷಗಳನ್ನು ಡ್ರಾ ಮಾಡಿ ಖರ್ಚು ಮಾಡಿರುವುದು ನಿಯಮಕ್ಕೆ ವಿರುದ್ಧವಾಗಿರುತ್ತದೆ ಮತ್ತು 2012 ನವೆಂಬರ್‌ನಲ್ಲಿ ನಡೆದ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಫೇಲಾದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕಾಗಿ ಸಲ್ಲಿಸಿದ್ದು, ಎಲ್ಲಾ ವಿದ್ಯಾರ್ಥಿಗಳ ಮರುಮೌಲ್ಯಮಾಪನ ಆಗದೇ ಇರುವುದು ಮತ್ತು ದಿನಾಂಕ: 06-03-2013ರಂದು ಕಮ್ಯುನಿಟಿಗೆ ಸಂಬಂಧಿಸಿದಂತೆ ಬೆಲೆಬಾಳುವ ಹಳೆಯ ವಸ್ತುಗಳನ್ನು ನಿರ್ದೇಶಕರ ಅನುಮೋದನೆ ಪಡೆಯದೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸದೆ ಸಾರ್ವಜನಿಕವಾಗಿ ಹರಾಜು ಮಾಡದೆ ಸಂಸ್ಥೆಯ ಸಿಬ್ಬಂದಿಗಳಿಗೆ ನಿಯಮಬಾಹಿರವಾಗಿ ಹರಾಜು ಹಾಕಿರುವುದು ಒಬ್ಬ ಜವಾಬ್ದಾರಿಯುತ ಅಧಿಕಾರಿಗೆ ತರವಲ್ಲದ ರೀತಿಯಲ್ಲಿ ನಿಯಮಗಳಿಗೆ ವಿರುದ್ಧವಾಗಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರು ಸರ್ಕಾರಕ್ಕೆ ರೂ.1,36,200/-ಗಳ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ ನೀಡಿರುವ ಅನೇಕ ಜ್ಞಾಪನಗಳಿಗೆ ಉತ್ತರ ನೀಡದೆ, ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡದಿರುವುದು, ಅಧಿಕಾರ ದುರುಪಯೋಗಪಡಿಸಿಕೊಂಡು ಒಬ್ಬ ಸರ್ಕಾರಿ ನೌಕರನನ್ನು ಮೇಲಾಧಿಕಾರಿಗಳ ಗಮನಕ್ಕೆ ತರದೇ ಅಧಿಕಾರ ವ್ಯಾಪ್ತಿ ಮೀರಿ ವಜಾಗೊಳಿಸಿರುವುದು ಹಾಗೂ ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ನಿವೇಶನದ ಬಗ್ಗೆ ಸರ್ಕಾರಿ ವಕೀಲರಿಗೆ ಕಾಲಕಾಲಕ್ಕೆ ದಾಖಲಾತಿಗಳನ್ನು ಒದಗಿಸದೇ, ನ್ಯಾಯಾಲಯಕ್ಕೆ ಹಾಜರಾಗದೆ ಸರ್ಕಾರಕ್ಕೆ ತುಂಬಲಾಗದ ನಷ್ಟ ಉಂಟು ಮಾಡಿರುವುದು, ನಿಯಮಬಾಹಿರವಾಗಿ Alto ಕಾರನ್ನು ಖರೀದಿಸಿದ್ದಲ್ಲದೆ ಪಿ.ಡಿ. ಖಾತೆಯಿಂದ ರೂ.3.00 ಲಕ್ಷಗಳನ್ನು ಡ್ರಾ ಮಾಡಿ ಖರ್ಚು ಮಾಡಿರುವುದು, 2012ರ ನವೆಂಬರ್‌ನಲ್ಲಿ ನಡೆದ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಡಿಟಿಇ ಲಿಂಕ್ ಅಪಲೋಡ್ ಮಾಡದೇ ಎಲ್ಲಾ ವಿದ್ಯಾರ್ಥಿಗಳ ಮರುಮೌಲ್ಯಮಾಪನ ಆಗದೇ ಇರುವುದು ಹಾಗೂ ಬೆಲೆ ಬಾಳುವ ವಸ್ತುಗಳನ್ನು ನಿಯಮಬಾಹಿರವಾಗಿ ಸಂಸ್ಥೆಯ ಸಿಬ್ಬಂದಿಗಳಿಗೆ ಹರಾಜು ಹಾಕಿರುವುದು ಈ ಎಲ್ಲಾ ಪ್ರಕರಣಗಳನ್ನು ಅವಲೋಕಿಸಿದಾಗ ಶ್ರೀ ಗೋವಿಂದರಾಜು ಇವರು ಅಧಿಕಾರ ವ್ಯಾಪ್ತಿ ಮೀರಿ ಬೇಜವಾಬ್ದಾರಿತನದಿಂದ ವರ್ತಿಸಿ ಕರ್ತವ್ಯದಲ್ಲಿ ನಿರ್ಲಕ್ಷತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3 (1)ರ ಉಪನಿಯಮ (i), (ii) (iii) ಮತ್ತು 2(i) ನ್ನು ಉಲ್ಲಂಘಿಸಿದ ಆರೋಪಕ್ಕೆ ಒಳಗಾಗಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಆಡಳಿತಾತ್ಮಕ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿಯವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇವರನ್ನು ಕೆಸಿಎಸ್ [ಸಿಸಿಎ] ನಿಯಮಾವಳಿ 10 (1)ಡಿ ರನ್ವಯ ಸೇವೆಯಿಂದ ಅಮಾನತ್ತಿನಲ್ಲಿಡಲು ಶಿಫಾರಸ್ಸು ಮಾಡಿರುತ್ತಾರೆ.

RECEIVED 20/08/2013 17:04 +91-80-22261212 DTE BANGALORE
ROM :am FAX NO. : 20 Aug. 2013 5:02PM P3

ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 197 ಡಿಟಿಇ 2013**
**ಬೆಂಗಳೂರು, ದಿನಾಂಕ: 19ನೇ ಆಗಸ್ಟ್ 2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ಇವರ ವಿರುದ್ಧ ನಡೆಸಲಾದ ಪೂರ್ವಭಾವಿ ವಿಚಾರಣೆಯಲ್ಲಿ ಇವರು ಅವ್ಯವಹಾರ, ದುರಾಚಾರ, ದುರ್ನಡತೆಯಿಂದ ಅಧಿಕಾರ ವ್ಯಾಪ್ತಿ ಮೀರಿ ಬೇಜವಾಬ್ದಾರಿತನದಿಂದ ವರ್ತಿಸಿ ಕರ್ತವ್ಯ ನಿರ್ಲಕ್ಷ್ಯತೆ ಎಸಗಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸದರಿಯವರು ಕರ್ತವ್ಯದಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆಯನ್ನು ತೋರಿಸುವಲ್ಲಿ ವಿಫಲರಾಗಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ತವ್ಯ ಚ್ಯುತಿ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3 (1)ರ ಉಪನಿಯಮ (i), (ii) (iii) ಮತ್ತು 2(i) ನ್ನು ಉಲ್ಲಂಘಿಸಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ಮತ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ 10(1) (ಡಿ) ಅನ್ವಯ ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಸದರಿಯವರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಸದರಿಯವರು ಇಲಾಖೆಯ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
19/8/13
(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

**ಗೆ:**

(1) ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ 1&2), ಕರ್ನಾಟಕ, ಬೆಂಗಳೂರು.
(2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
(3) ಜಿಲ್ಲಾ ಖಜಾನಾಧಿಕಾರಿ, ಬೀದರ್, ಬೀದರ್ ಜಿಲ್ಲೆ.
(4) ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್.
(5) ಶಾಖಾ ರಕ್ಷಾ ಕಡತ.
(6) ಹೆಚ್ಚುವರಿ ಪ್ರತಿ.

ಹಿಂಬರಹ ಸಂಖ್ಯೆ: ಡಿಟಿಇ 06 ಡಿಇಕ್ಯೂ (1) 2013 (ಏಕ ಕಡತ) / 1854 ದಿನಾಂಕ: 20-08-2013

ಮೇಲ್ಕಂಡ ಸರ್ಕಾರದ ಆದೇಶವನ್ನು ಈ ಕೆಳಕಂಡವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

**ಇವರಿಗೆ,**

ಶ್ರೀ ಗೋವಿಂದರಾಜು, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್, ಸಂಸ್ಥೆಯಲ್ಲಿ ಉಪನ್ಯಾಸಕರ ವೃಂದದಲ್ಲಿ ಜೇಷ್ಠತೆಯಲ್ಲಿ ಹಿರಿಯರಾದವರಿಗೆ ಪ್ರಭಾರೆ ವಹಿಸಿಕೊಡಲು ಸೂಚಿಸಲಾಗಿದೆ.

**ಪ್ರತಿ: ಮಾಹಿತಿಗಾಗಿ**

1. ಮಹಾಲೇಖಾಪಾಲರು, (ಎ & ಇ, ಲೆಕ್ಕಪರಿಶೋಧನೆ 1&2), ಕರ್ನಾಟಕ, ಬೆಂಗಳೂರು.
2. ಜಿಲ್ಲಾ ಖಜಾನಾಧಿಕಾರಿ, ಬೀದರ್, ಬೀದರ್ ಜಿಲ್ಲೆ.
3. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
4. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್.
5. ನಿರ್ದೇಶಕರ ಆಪ್ತಶಾಖೆಗೆ ಮಾಹಿತಿಗಾಗಿ.
6. ಇಎಸ್‌ಟಿ (1)ಎ, ಇಎಸ್‌ಟಿ (9), ಇಎಸ್‌ಟಿ (8)ಬಿ, ಇಎಸ್‌ಟಿ(7) ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

ಆಡಳಿತಾಧಿಕಾರಿ.